**ದಿನಾಂಕಃ 12.08.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಜಿ ಟಿ ಜೆ. ವಕೀಲರಿಂದಃ-**

ನಿಪಿ-1 ರ ವಂಶವೃಕ್ಷದಲ್ಲಿ ಬರೆದಿರುವ ವಿಚಾರಗಳು ಸರಿ ಇರುವುದಿಲ್ಲ. ನಿಪಿ-1 ರಲ್ಲಿ ಬರೆದಿರುವ ನನ್ನ 2 ನೇ ಹೆಂಡತಿಗೆ ಎಷ್ಟು ಜನ ಮಕ್ಕಳು ಎಂದರೆ 2 ನೇ ಹೆಂಡತಿ ಇರುವುದಿಲ್ಲ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಎದುರುದಾರರು ತರೀಕೆರೆಯ ಆಸ್ಪತ್ರೆಯಲ್ಲಿ ಹುಟ್ಟಿರುತ್ತಾರೆ. ನಾನು ಅರ್ಜಿಯ 2 ನೇ ಪ್ಯಾರಾದಲ್ಲಿ ಹೇಳಿರುವಂತೆ ಎದುರುದಾರರು ಹೋರಿತಿಮ್ಮನಹಳ್ಳಿ ಗ್ರಾಮದಲ್ಲಿ ಹುಟ್ಟಿರುತ್ತಾರೆ ಎಂಬ ಅಂಶವು ನಿಜವಾಗಿರುವುದಿಲ್ಲ. ನನ್ನ ಮತ್ತು ಶಶಿಕಲಾ ರವರ ವಿವಾಹವು ದಿಃ 10.05.1991 ರಲ್ಲಿ ಆಗಿರುತ್ತದೆ. ಅವರಿಗೆ 1992 ಮತ್ತು 1994 ರಲ್ಲಿ 1 ಮತ್ತು 2 ನೇ ಎದುರುದಾರರು ಜನಿಸಿರುತ್ತಾರೆ. ಆ ಸಮಯದಲ್ಲಿ ನನ್ನ ಹೆಂಡತಿಗೆ ತಲೆಗೆ ಹೊಡೆದು ಅವರ ತಲೆಗೆ ಹೊಲಿಗೆಯನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಹೆಂಡತಿ ಮತ್ತು ಮಕ್ಕಳನ್ನು ಮನೆಯಿಂದ ಹೊರಗೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರರು ಮತ್ತು ನನ್ನ ಹೆಂಡತಿ ತರೀಕೆರೆಯಲ್ಲಿರುವ ಅವರ ತಾಯಿ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ.

1 ಮತ್ತು 2 ನೇ ಎದುರುದಾರರನ್ನು ಹೋರಿತಿಮ್ಮನಹಳ್ಳಿಯ ಸರ್ಕಾರಿ ಶಾಲೆಗೆ ದಾಖಲಿಸಿರುತ್ತೇನೆ. ಈ ಸಂಬಂಧ ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ-2 ಶಾಲಾ ದಾಖಲಾತಿ ನಕಲು ಅಲ್ಲಾ ಎಂದರೆ ಸರಿಯಲ್ಲ. ಎದುರುದಾರರು ತರೀಕೆರೆಯ ಕಂಬದ ಬೀದಿಯ ಸರ್ಕಾರಿ ಶಾಲೆಯಲ್ಲಿ 1 ರಿಂದ 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಅವರು ಪ್ರೌಢಶಾಲೆಯನ್ನು ತರೀಕೆರೆಯಲ್ಲಿ ಓದಿರುತ್ತಾರೆ, ಸದರಿ ಶಾಲೆಯ ಹೆಸರನ್ನು ನನಗೆ ಹೇಳಲು ಆಗುವುದಿಲ್ಲ. ಎದುರುದಾರರು ವಿದ್ಯಾಭ್ಯಾಸ ಮಾಡಿದ ಕಾಲೇಜಿನ ಹೆಸರು ನನಗೆ ಹೇಳಲಾಗುವುದಿಲ್ಲ. 1 ನೇ ಎದುರುದಾರರು ವಿದ್ಯಾಭ್ಯಾಸವನ್ನು ಮಾಡಿ ನೀರಾವರಿ ಇಲಾಖೆಯಲ್ಲಿ ಅಭಿಯಂತರರಾಗಿ ಕೆಲಸ ನಿರ್ವಹಿಸುತ್ತಿದ್ದಾನೆ. ನಾನು ಎದುರುದಾರರಿಗೆ ವಿದ್ಯಾಭ್ಯಾಸ ಕೊಡಿಸದೇ ಇರುವ ಕಾರಣ ಅವರು ಏನು ವಿದ್ಯಾಭ್ಯಾಸ ಮಾಡಿದ್ದಾರೆ ಎಂದು ಹೇಳಲಾಗುವುದಿಲ್ಲ ಎಂದರೆ ನಾನೇ ಅವರನ್ನು ಓದಿಸಿರುತ್ತೇನೆ ಎಂದು ನುಡಿಯುತ್ತಾರೆ.

2008 ರಲ್ಲಿ ನನ್ನ ಹೆಂಡತಿಯು ತರೀಕೆರೆ ನ್ಯಾಯಾಲಯದಲ್ಲಿ ಜೀವನಾಂಶಕ್ಕೆ ಅರ್ಜಿ ಸಲ್ಲಿಸಿದ್ದು ಅದರಲ್ಲಿ ನನ್ನ ಹೆಂಡತಿಗೆ ರೂ.1,000 ಮತ್ತು ತಲಾ ರೂ.500 ಎದುರುದಾರರಿಗೆ ಮಾಸಿಕವಾಗಿ ಜೀವನಾಂಶಕ್ಕೆ ಆದೇಶವಾಗಿತ್ತದೆ ಎಂದರೆ ಸರಿ. ಸದರಿ ಜೀವನಾಂಶವನ್ನು ನಾನು ಸರಿಯಾಗಿ ಪಾವತಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. 2014 ರಲ್ಲಿ ತರೀಕೆರೆಯ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ನನ್ನ ಹೆಂಡತಿ ಕ್ರಿಮಿನಲ್ ಮಿಸ್ ನಂ 243ಃ 2014 ರಂತೆ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಅರ್ಜಿಯಲ್ಲಿ ನಾನು ಹೆಂಡತಿಯೊಂದಿಗೆ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ನ್ಯಾಯಾಲಯದಲ್ಲಿ ಎದುರುದಾರರು ಓ ಎಸ್ 29ಃ2021 ರಂತೆ ಆಸ್ತಿಯಲ್ಲಿ ವಿಭಾಗ

ಕೋರಿ ನನ್ನ ವಿರುದ್ದ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಸರ್ವೆ ನಂ 4 ರಲ್ಲಿ 2 ಎಕರೆ 38 ಗುಂಟೆ ಜಮೀನು ಇರುವುದಾಗಿ ನಮೂದಾಗಿರುತ್ತದೆ ಎಂದರೆ ಸರಿ. ಸರ್ವೆ ನಂ 16ಃಪಿ7 ರಲ್ಲಿ 2 ಎಕರೆ 20 ಗುಂಟೆ ಜಮೀನು ಇದೆ ಎಂದು ನಮೂದಗಿರುತ್ತದೆ ಎಂದರೆ ಸದರಿ ಜಮೀನು ಇರುವುದಿಲ್ಲ ಎಂದು ನುಡಿಯುತ್ತಾರೆ. ಖಾತೆ ನಂ 2 ರಲ್ಲಿ 20 x 21 ರ ವಿಸ್ತಿರ್ಣದ ಮನೆ ಇರುತ್ತದೆ ಎಂದರೆ ಸರಿ. ಖಾತೆ ನಂ 2ಃ1 ರಲ್ಲಿ 21 x 21 ರ ವಿಸ್ತಿರ್ಣದ ಮನೆ ಇರುತ್ತದೆ ಎಂದರೆ ಸರಿಯಲ್ಲ. ಖಾತೆ ನಂ 3 ರಲ್ಲಿ 41 x 41 ರ ವಿಸ್ತಿರ್ಣದ ಖಾಲಿ ನಿವೇಶನ ಇರುತ್ತದೆ ಎಂದರೆ ಸರಿಯಲ್ಲ. ಈ ಎಲ್ಲಾ ಆಸ್ತಿಗಳು ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಎದುರುದಾರರಿಗೆ ಆಸ್ತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಭಾಗಕ್ಕೆ ಬಂದ ಆಸ್ತಿಯಲ್ಲಿ ಹಿಸ್ಸೆಯನ್ನು ಎದುರುದಾರರಿಗೆ ನೀಡಲು ನನಗೆ ಯಾವುದೇ ತೊಂದರೆ ಇಲ್ಲಾ ಎಂದರೆ ಸರಿ.

ಎದುರುದಾರರಿಗೆ ನಾನು ಯಾವುದೇ ವಿದ್ಯಾಭ್ಯಾಸವನ್ನು ಕೊಡಿಸಿರುವುದಿಲ್ಲ ಮತ್ತು ಅವರಿಗೆ ನನ್ನ ಯಾವುದೇ ಅಸ್ತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರ ತಾಯಿಯೇ ಎದುರುದಾರರನ್ನು ಕೂಲಿ ನಾಲಿ ಮಾಡಿ ಸಾಕುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ ತರೀಕೆರೆ ನ್ಯಾಯಾಲಯದಲ್ಲಿ ರೂ.1,000 ಜೀವನಾಂಶ ನೀಡಬೇಕೆಂದು ನನ್ನ ವಿರುದ್ದ ಆದೇಶವಾಗಿರುತ್ತದೆ ಎಂದರೆ ಸಾಕ್ಷಿಯು ನಾನು ರೂ. 2,000 ರಿಂದ 3,000 ಗಳನ್ನು ಪಾವತಿ ಮಾಡಿಕೊಂಡು ಬರುತ್ತಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಹಣದಿಂದ ನನ್ನ ಹೆಂಡತಿಗೆ ಜೀವನ ಮಾಡಲು ಸಾಧ್ಯವಿಲ್ಲದೇ ಅವರು ಕೂಲಿ ನಾಲಿ ಮಾಡಿ ಜೀವನ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರು ಈಗಲೂ ವಿದ್ಯಾಭ್ಯಾಸ ಮಾಡುತ್ತಿದ್ದು ನನ್ನ ಹೆಂಡತಿಯು ಕೂಲಿ ನಾಲಿ ಮಾಡಿ ಅವರ ಖರ್ಚನ್ನು ನಿಭಾಯಿಸುತ್ತಿದ್ದಾರೆ ಎಂದರೆ ಸರಿಯಲ್ಲ.

ನನ್ನ ಆಸ್ತಿಯಿಂದ ನನಗೆ ವಾರ್ಷಿಕ ರೂ. 10.00 ಲಕ್ಷ ಆದಾಯ ಬರುತ್ತದೆ ಎಂದರೆ ಸರಿಯಲ್ಲ. ಎದುರುದಾರರು ನನ್ನ ವಿರುದ್ದ ಆಸ್ತಿಯಲ್ಲಿ ವಿಭಾಗ ಕೋರಿ ದಾವೆಯನ್ನು ಹೂಡಿರುವ ಕಾರಣ ಅವರ ವಿರುದ್ದ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಷಯಗಳು ಗೊತ್ತಿದ್ದರೂ ಈ ಪ್ರಕರಣಕ್ಕೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ</u>

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.